## ಉದ್ಯೋಗಾವಕಾಶ ಸೃಷ್ಟಿ, ಬೆಳವಣಿಗೆ ಮತ್ತು ಉದ್ಯಮಶೀಲತೆಗೆ ಕೌಶಲಾಭಿವೃದ್ಧಿ ಅನಿವಾರ್ಯ

# ಕೌಶಲ ಕಲಿಕೆ ಅನ್ನುವುದು ಜೀವಿತಾವಧಿಯ ಪ್ರಕ್ರಿಯೆ

**ಸಂದರ್ಶನ**

ಕೇಂದ್ರ ಕೌಶಲಾಭಿವೃದ್ಧಿ, ಎಲೆಕ್ಟ್ರಾನಿಕ್ಸ್ ಮತ್ತು ತಂತ್ರಜ್ಞಾನ ಇಲಾಖೆ ಸಚಿವರಾದ ರಾಜೀವ್ ಚಂದ್ರಶೇಖರ್ ಅವರು ಈ ಹಿಂದೆ ಸೆಮಿಕಂಡಕ್ಟರ್ ಇಂಡಸ್ಟ್ರಿಯಲ್ಲಿ ಎಂಜಿನಿಯರ್ ಆಗಿದ್ದವರು. ಕೌಶಲಾಭಿವೃದ್ಧಿ ನಿಟ್ಟಿನಲ್ಲಿ ಸರಕಾರದ ಪಾತ್ರವನ್ನು ಟೈಮ್ಸ್ ಆಫ್ ಇಂಡಿಯಾದ ಸಂಜೀವ್ ಶಂಕರ್ ಅವರಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

**1. ಕಳೆದ 2014ರಿಂದ ಕೌಶಲಾಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ. ಈಗ ನಡೆಯುತ್ತಿರುವ ಡಿಜಿಟಲ್ ಪರಿವರ್ತನೆಯ ಮೇಲೆ ಇದು ಪ್ರಭಾವ ಬೀರಿದೆಯೇ?**

– ಪ್ರಧಾನಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಸ್ಕಿಲ್ ಇಂಡಿಯಾ ಒಂದು. ಭಾರತದ ಯುವಜನ ಸಂಪನ್ಮೂಲದ ವಿಕಾಸಕ್ಕೆ ಇದು ಅವಶ್ಯಕ. ವಿಶ್ವದಲ್ಲಿಯೇ ಅತ್ಯಂತ ಕೌಶಲಯುಕ್ತ ಯುವಜನ ಸಂಪನ್ಮೂಲ ತಾಣವಾಗಿ ದೇಶ ಹೊರಹೊಮ್ಮಬೇಕು ಎಂಬುದು ಅವರ ಆಶಯ. ಇದರಿಂದ ಭಾರತಕ್ಕೂ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ. ಜತೆಗೆ ಕೌಶಲಯುಕ್ತ ಜನ ಸಂಪನ್ಮೂಲದ ಅಗತ್ಯ ಇರುವ ರಾಷ್ಟ್ರಗಳ ಬೇಡಿಕೆಯನ್ನೂ ಪೂರೈಸಬಹುದು.

ಕಳೆದ 2014ರಿಂದ ಸರಕಾರ ಸ್ಕಿಲ್ ಇಂಡಿಯಾ ಅಡಿಯಲ್ಲಿ 2 ಕೋಟಿ ಯುವಜನರಿಗೆ ಕೌಶಲ ತರಬೇತಿಯನ್ನು ನೀಡಿದೆ. ದೇಶಾದ್ಯಂತ 14,000 ತರಬೇತಿ ಕೇಂದ್ರಗಳು ಸ್ಥಾಪನೆಯಾಗಿವೆ. 700 ಪಿಎಂ ಕೌಶಲ ಕೇಂದ್ರಗಳು ಸ್ಥಾಪನೆಯಾಗಿವೆ. ಐಟಿಐ ಕೇಂದ್ರಗಳ ಸಂಖ್ಯೆ 14 ಸಾವಿರಕ್ಕೆ ವಿಸ್ತರಣೆಯಾಗಿವೆ. ನಾನಾ ಸಚಿವಾಲಯಗಳು ಮತ್ತು ವೃತ್ತಿಪರ ತರಬೇತಿ ಮಂಡಳಿ ಎನ್‌ಸಿವಿಟಿ ವತಿಯಿಂದ ಒಟ್ಟಾರೆ 4,000ಕ್ಕೂ ಹೆಚ್ಚು ಕೋರ್ಸ್‌ಗಳು ಲಭ್ಯವಿದೆ.

ಈ ವರ್ಷ ಜುಲೈನಲ್ಲಿ ಪ್ರಧಾನಿಯವರು ಕೌಶಲಾಭಿವೃದ್ಧಿಗೆ ಹೊಸ ನಿರ್ದೇಶನಗಳನ್ನೂ ನೀಡಿದರು. ಕೋವಿಡ್-19 ಬಿಕ್ಕಟ್ಟಿನ ನಂತರ ಡಿಜಿಟಲ್ ಶಿಕ್ಷಣ, ತರಬೇತಿಗೆ ಬೇಡಿಕೆ ಹೆಚ್ಚಿದೆ. ಹೀಗಾಗಿ ರಾಷ್ಟ್ರೀಯ ಶಿಕ್ಷಣ ನೀತಿ-2020ರಲ್ಲಿ ಕೌಶಲ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಈ ನೂತನ ಶಿಕ್ಷಣ ನೀತಿಯು ಸ್ವತಂತ್ರ ಭಾರತದ ಅತಿ ದೊಡ್ಡ ಶೈಕ್ಷಣಿಕ ಸುಧಾರಣೆಯಾಗಿದ್ದು, ಯುವ ಜನತೆಗೆ ಕಲಿಕೆ ಮತ್ತು ಉದ್ಯೋಗಾವಕಾಶ ಪಡೆಯಲು ಅನೇಕ ದಾರಿಗಳನ್ನು ಸೃಷ್ಟಿಸಲಿದೆ.

**2. ಅಪ್ರೆಂಟಿಸ್‌ಶಿಪ್ ಕಾರ್ಯಕ್ರಮಗಳಿಗೆ ಉದ್ಯಮದ ಪ್ರತಿಕ್ರಿಯೆ ಹೇಗಿದೆ?**

-ಉದ್ಯಮ ವಲಯ ವ್ಯಾಪಕವಾಗಿ ಅಪ್ರೆಂಟಿಸ್‌ಶಿಪ್ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿವೆ. ಇದು ಯುವಜನತೆಗೆ ಉದ್ಯೋಗಾವಕಾಶ ಪಡೆಯಲು ಸಹಕಾರಿಯಾಗಿದೆ. ಎನ್‌ಎಟಿಎಸ್(ನ್ಯಾಶನಲ್ ಅಪ್ರೆಂಟಿಸ್‌ಶಿಪ್ ಟ್ರೈನಿಂಗ್ ಸ್ಕೀಮ್) ಮತ್ತು ಎನ್‌ಎಪಿ(ನ್ಯಾಶನಲ್ ಅಪ್ರೆಂಟಿಸ್‌ಶಿಪ್ ಪ್ರಮೋಶನ್ ಸ್ಕೀಮ್) ಯೋಜನೆಗಳನ್ನು ಉತ್ತೇಜಿಸಲಾಗುತ್ತಿದೆ.

**ಕೆಲವು ಅಧ್ಯಯನಗಳ ಪ್ರಕಾರ ಸಂಭವನೀಯ ಉದ್ಯೋಗದಾತರು ಮತ್ತು ಉದ್ಯೋಗಾಕಾಂಕ್ಷಿಗಳ ನಡುವೆ ಮಾಹಿತಿಯ ಕೊರತೆ ಇದೆ. ಕೌಶಲ ಕೊರತೆಯೂ ಅಡಚಣೆಯಾಗಿದೆ ಎಂಬ ವರದಿಗಳಿವೆಯಲ್ಲವೇ?**

-ಕೌಶಲಗಳ ಕಲಿಕೆ ನಿರಂತರವಾಗಿ ಇರಬೇಕು ಎಂದು ಪ್ರಧಾನಮಂತ್ರಿಗಳು ಸದಾ ಪ್ರತಿಪಾದಿಸುತ್ತಾರೆ. ಉದ್ಯೋಗ ಗಳಿಕೆಗೆ ಮಾತ್ರವಲ್ಲದೆ ಉದ್ಯಮಶೀಲತೆಯನ್ನು ಹೆಚ್ಚಿಸಿಕೊಳ್ಳಲೂ ಕೌಶಲಗಳು ಅಗತ್ಯವಾಗಿದೆ. ಸ್ಕಿಲ್ ಇಂಡಿಯಾದ ಉದ್ದೇಶವೂ ಉದ್ಯಮಶೀಲತೆಯನ್ನು ಹೆಚ್ಚಿಸುವುದಾಗಿದೆ. ತರಬೇತಿ ಪಡೆದ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರ ನಡುವೆ ಸಂಪರ್ಕ ಕೊರತೆಯನ್ನು ನಿವಾರಿಸಲು ಡಿಜಿಟಲೀಕರಣ ನೆರವಾಗುತ್ತದೆ.

**ಭಾರತದಲ್ಲಿ ಮಹಿಳಾ ಉದ್ಯೋಗಿಗಳ ಪಾಲ್ಗೊಳ್ಳುವಿಕೆ ಕಡಿಮೆಯಾಗಿದೆ. ಕೌಶಲಯುಕ್ತ ಮಹಿಳಾ ಉದ್ಯೋಗಿಗಳ ಸಂಖ್ಯೆ ಹೆಚ್ಚಿಸುವುದು ಸವಾಲಾಗಿದೆಯೇ?**

– ನಿಜ. ಇದೊಂದು ಕೊರತೆ ಕೆಲ ಭಾಗಗಳಲ್ಲಿ ಇದೆ. ಹೀಗಿದ್ದರೂ ಹಲವು ಕಡೆಗಳಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಎಲ್ಲ ಸಚಿವಾಲಯಗಳಲ್ಲಿ ಮಹಿಳೆಯರಿಗೆ ಸಾಧ್ಯವಾದಷ್ಟು ಅವಕಾಶಗಳನ್ನು ನೀಡಲಾಗುತ್ತಿದೆ. ಐಟಿ ಕ್ಷೇತ್ರದಲ್ಲಿ ಶೇ.40ಕ್ಕೂ ಹೆಚ್ಚು ಮಂದಿ ಮಹಿಳಾ ಉದ್ಯೋಗಿಗಳು ಇದ್ದಾರೆ. ಪುರುಷ ಪ್ರಧಾನವಾದ ಪ್ಲಂಬಿಂಗ್ ಕೋರ್ಸ್‌ನಲ್ಲೂ ಮಹಿಳೆಯರಿಗೆ ಈಗ ಅವಕಾಶ ಕಲ್ಪಿಸಲು ವಿನ್ಯಾಸ ಸಿದ್ಧಪಡಿಸಲಾಗಿದೆ. ಮಹಿಳೆಯರಿಗೆ ವಿಶೇಷವಾದ ಐಟಿಐಗಳನ್ನು ವಿಸ್ತರಿಸಲಾಗುತ್ತಿದೆ. ಬಹುತೇಕ ಎನ್‌ಐಇಎಲ್‌ಐಟಿಗಳಲ್ಲಿ (ಎಲೆಕ್ಟ್ರಾನಿಕ್ಸ್ ಆ್ಯಂಡ್ ಐಟಿ ಸ್ಕಿಲ್ಲಿಂಗ್ ಸೆಂಟರ್) ಮಹಿಳಾ ಹಾಸ್ಟೆಲ್‌ಗಳನ್ನು ಸ್ಥಾಪಿಸಲಾಗಿದೆ. ನಾನು ಹಲವಾರು ಅಂಥ ಕೇಂದ್ರಗಳಿಗೆ ಭೇಟಿ ನೀಡಿದ್ದೇನೆ. ವಿದ್ಯಾರ್ಥಿನಿಯರು ಕೌಶಲ ಕಲಿಕೆಗೆ ಆಸಕ್ತಿ ವಹಿಸುತ್ತಿದ್ದಾರೆ. ಜಮ್ಮು ಕಾಶ್ಮೀರದಲ್ಲಿ ತರಬೇತಿ ಕೇಂದ್ರವೊಂದರಲ್ಲಿ ವಿದ್ಯಾರ್ಥಿನಿಯೊಬ್ಬರು ಹೆಚ್ಚೆಚ್ಚು ಕೋರ್ಸ್‌ಗಳನ್ನು ಕಲ್ಪಿಸುವಂತೆ ಕೋರಿದ್ದರು. ಡಿಜಿಟಲ್ ಕೌಶಲ ಕಲಿಕೆ ಸಾಮಾನ್ಯವಾಗುತ್ತಿದೆ.

**ತಂತ್ರಜ್ಞಾನ ಅಭಿವೃದ್ಧಿಯ ಈ ಯುಗದಲ್ಲಿ ವೃತ್ತಿಯ ಮಧ್ಯ ಭಾಗದಲ್ಲಿರುವ ಉದ್ಯೋಗಿಗಳಿಗೆ ತಮ್ಮ ಕೌಶಲವನ್ನು ಮೇಲ್ದರ್ಜೆಗೇರಿಸಬೇಕಾದ ಅವಶ್ಯಕತೆ ಇರುತ್ತದೆ. ಇದಕ್ಕೆ ಏನು ಕಾರ್ಯತಂತ್ರವಿದೆ?**

– ಸರಕಾರ ಆರಂಭಿಕ ಹಂತದ ಕೌಶಲ ತರಬೇತಿಯನ್ನು ಮಾತ್ರ ಗುರಿಯಾಗಿಟ್ಟುಕೊಂಡಿಲ್ಲ. ಕೌಶಲ ಕಲಿಕೆ ಜೀವನಪರ್ಯಂತ ಪ್ರಕ್ರಿಯೆ ಎಂಬುದು ಪ್ರಧಾನಿಯವರ ನಂಬಿಕೆಯೂ ಹೌದು. ಆದ್ದರಿಂದ ವರ್ಚುವಲ್ ಮೂಲಕವೂ ತರಬೇತಿ ನೀಡಲಾಗುತ್ತಿದೆ. ಕೌಶಲಗಳನ್ನು ನವೀಕರಿಸಿಕೊಳ್ಳಲೂ ಹಲವಾರು ಕಾರ್ಯಕ್ರಮಗಳನ್ನು ಸ್ಕಿಲ್ ಇಂಡಿಯಾ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಕರಿಯರ್ ಹಾಗೂ ಜೀವನದಲ್ಲಿ ಎಲ್ಲರೂ ಉತ್ತಮ ಕೌಶಲದೊಂದಿಗೆ ಸುಧಾರಣೆ ಹೊಂದಬೇಕು ಎಂಬುದು ನಮ್ಮೆಲ್ಲರ ಆಶಯವಾಗಿದೆ.

